ಕರ್ನಾಟಕ ಪ್ಲಾಂಟೇಷನ್ ನಿಯಮಿತ ಕಾರ್ಮಿಕರಿಗೆ ವೇತನ ನಿಲುಗಡೆ

1184(1457) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಪ್ಲಾಂಟೇಷನ್ ನಿಯಮಿತ ಕಾರ್ಮಿಕರುಗಳಿಗೆ ಕಳೆದ 6 ತಿಂಗಳುಗಳಿಂದ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವೇತನವಿಲ್ಲದೆ ತುಂಬಾ ಕಷ್ಟದ ಸ್ಥಿತಿಯಲ್ಲಿರುವ ಈ ನೌಕರರ ಹಿತಾಸಕ್ತಿ ಕಾಯಲು ಸರ್ಕಾರವು ತೆಗೆದುಕೊಂಡ ಕ್ರಮ ಏನು?

ಶ್ರೀ ಖಮರುಲ್ ಇಸ್ಲಾಂ(ಕಾರ್ಮಿಕ ಸಚಿವರು):

ಅ) ಹೌದು

ಆ) ಅಕ್ಟೋಬರ್ 2002ರಿಂದ ಫೆಬ್ರವರಿ 2003ರವರೆಗಿನ ವೇತನವನ್ನು ಕಾರ್ಮಿಕರಿಗೆ ಪಾವತಿ ಮಾಡದೇ ಇರುವುದು ವೇತನ ಪಾವತಿ ಕಾಯ್ದೆ 1936ರ ಪರಿಚ್ಛೇದ 5 ಮತ್ತು ಕರ್ನಾಟಕ ವೇತನ ಪಾವತಿ ನಿಯಮಗಳು 1963ರ ಅಧಿನಿಯಮ 9ರ ಉಲ್ಲಂಘನೆಯಾಗಿದ್ದು, ಸದರಿ ಉಲ್ಲಂಘನೆಗಾಗಿ ಜಂಟಿ ವ್ಯವಸ್ಥಾಪಕ ನಿರ್ದೇಶಕರು, ಮೆ;ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್(ಕೆಪಿಎಲ್)ಶಿವಮೊಗ್ಗ, ಇವರಿಗೆ ಕಾಯ್ದೆಯ ಉಲ್ಲಂಘನೆಗಾಗಿ ಪ್ರಈಗಾಗಲೇ ನೋಟೀಸನ್ನುನೀಡಲಾಗಿದೆ.ಅಲ್ಲದೇ ವೇತನ ಪಾವತಿಯಾಗದಿರುವ ಬಗ್ಗೆ ಆಡಳಿತವರ್ಗ ಮತ್ತು ಕಾರ್ಮಿಕರ ನಡುವೆ ಸಭೆಯನ್ನು ಕರೆದು, ಸಂಬಂಧಿಸಿದ ಅಧಿಕಾರಿಗಳು ಸಂಧಾನ ನಡೆಸುತ್ತಿದ್ದಾರೆ.

ತೀರ್ಥಹಳ್ಳಿಯಲ್ಲಿ ಕ್ರೀಡಾಂಗಣ ನಿರ್ಮಾಣ

1185(1459) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿಯಲ್ಲಿ ನಿರ್ಮಿಸುತ್ತಿರುವ ಸಾರ್ವಜನಿಕ ಕ್ರೀಡಾಂಗಣದ ಯೋಜನಾ ವೆಚ್ಚ ಎಷ್ಟು?

ಆ) ಈ ಸಾಲಿನಲ್ಲಿ ನಿಗಧಿಪಡಿಸಿದ ಹಣ ಎಷ್ಟು?

ಇ) ಕ್ರೀಡಾಂಗಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್(ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ರೂ. 92.30ಲಕ್ಷಗಳು

ಆ) ರೂ. 1.50 ಲಕ್ಷಗಳು

ಇ) ಕೇಂದ್ರ ಸರ್ಕಾರದ ಅನುದಾನ, ಸಂಸತ್ ಸದಸ್ಯರ ಅನುದಾನ, ಜಿಲ್ಲಾ ಪಂಚಾಯತ್ ಅನುದಾನ ಹಾಗೂ ಸಾರ್ವಜನಿಕ ವಂತಿಕೆ ಮತ್ತಿತರ ಮೂಲಗಳಿಂದ ಅನುದಾನ ಕ್ರೋಢೀಕರಿಸಿ ನಂತರ ಪೂರ್ಣಗೊಳಿಸಲಾಗುವುದು.

ತೀರ್ಥಹಳ್ಳಿ ತಾಲ್ಲೂಕಿನ ಅರಣ್ಯ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ

1186(1460) ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?